159/08

ಚುಕ್ಕೆ ಗುರುತಿಲ್ಲದ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ ಅಬ್ದುಲ್ ಜಬ್ಬರ್ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದ ಉತ್ತರ.**

**:ವಿಷಯ:**

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವು ವೇಗವಾಗಿ ಬೆಳೆಯುತ್ತಿರುವ ನಗರ ಹಾಗೂ ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಿದ್ದು, ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದರೆ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಸಾಕಾಗುತ್ತಿಲ್ಲ.

ಇದರಿಂದಾಗಿ ಅನೇಕ ವಿದ್ಯಾರ್ಥಿಗಳು ದೂರದ ಪ್ರದೇಶಗಳಿಗೆ ಪ್ರಯಾಣಿಸಿ ಶಿಕ್ಷಣ ಪಡೆಯಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದು, ವಿಶೇಷವಾಗಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರವು ಸುಮಾರು ಎರಡು ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನು ಹೊಂದಿದ್ದು, ಅಧಿಕವಾಗಿ ಅಹಿಂದಾ ವರ್ಗದವರನ್ನೂ ಒಳಗೊಂಡಂತೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣದಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ದೂರ ಪ್ರಯಾಣ, ಸಾರಿಗೆ ವೆಚ್ಚ, ಸುರಕ್ಷತೆ ಹಾಗೂ ಆರ್ಥಿಕ ತೊಂದರೆಗಳಿಂದಾಗಿ ಹಲವಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುವ ಸಾಧ್ಯತೆ ಇದ್ದು, ಇದರಿಂದ ಉನ್ನತ ಶಿಕ್ಷಣದ ದಾಖಲಾತಿ ಪ್ರಮಾಣ ಹೆಚ್ಚಿಸುವ ರಾಜ್ಯ ಸರ್ಕಾರದ ಉದ್ದೇಶಕ್ಕೂ ಧಕ್ಕೆಯಾಗುತ್ತಿದೆ. ಆದ್ದರಿಂದ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸೂಕ್ತ ಸ್ಥಳವನ್ನು ಗುರುತಿಸಿ, ಅಗತ್ಯ ಅನುದಾನವನ್ನು ಮಂಜೂರು ಮಾಡಿ, ಎಲ್ಲಾ ಮೂಲಸೌಕರ್ಯಗಳೊಂದಿಗೆ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ.

**:ಉತ್ತರ:**

ರಾಜ್ಯದಲ್ಲಿ ಒಟ್ಟು 440 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ 06 ತಾಲ್ಲೂಕುಗಳಿದ್ದು ಸದರಿ 06 ತಾಲ್ಲೂಕುಗಳಲ್ಲಿ ಇಲಾಖಾ ವ್ಯಾಪ್ತಿಯ ಪದವಿ ಕಾಲೇಜುಗಳು ಕಾರ್ಯನಿರ್ಹಿಸುತ್ತಿರುತ್ತವೆ, ಈಗಾಗಲೇ ಇಲಾಖಾ ವ್ಯಾಪ್ತಿಯಲ್ಲಿ 11 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು ಹಾಗೂ 08 ಖಾಸಗಿ ಅನುದಾನಿತ ಪದವಿ ಕಾಲೇಜು ಒಟ್ಟಾರೆ 19 ಕಾಲೇಜುಗಳಿರುತ್ತದೆ. ಸದರಿ ಕಾಲೇಜುಗಳ ವಿವರಗಳನ್ನು ಅನುಬಂಧಗಳಲ್ಲಿ ಲಗತ್ತಿಸಲಾಗಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳಿಗೆ ಮೇಲಿನ ಒಟ್ಟು 19 ಇಲಾಖಾ ವ್ಯಾಪ್ತಿಯ ಮೂಲಭೂತ ಸೌಕರ್ಯಗಳುಳ್ಳ ಪದವಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಪಡೆಯಬಹುದಾಗಿರುತ್ತದೆ.

ಸರ್ಕಾರದಿಂದ ಈಗಾಗಲೇ ರಾಜ್ಯದಲ್ಲಿ 440 ಸರ್ಕಾರಿ ಪದವಿ ಕಾಲೇಜುಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2026-2027 ನೇ ಸಾಲಿನ ಆಯವ್ಯಯದ ಭಾಷಣ ಕಂಡಿಕೆಗಳಲ್ಲಿ 08 ವಿವಿಧ ಕ್ಷೇತ್ರ/ಸ್ಥಳಗಳಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ/ವಸತಿಯುಕ್ತ ಸರ್ಕಾರಿ ಪದವಿ ಕಾಲೇಜುಗಳನ್ನು ಸ್ಥಾಪಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಇಡಿ/1/ಹೆಚ್‌ಪಿಸಿ/2024, ದಿನಾಂಕ: 13.02.2026 ರಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಸಂಬಂಧ 5 ಜನ ಸದಸ್ಯರ ಸಮಿತಿ ರಚಿಸಿ ಆದೇಶಿಸಲಾಗಿದೆ. ಪ್ರಸ್ತುತ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಪ್ರಸ್ತುತ ಅಸ್ತಿತ್ವದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಬಲವರ್ಧನೆ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿರುತ್ತದೆ. ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಉದ್ದೇಶ ಇರುವುದಿಲ್ಲ.

ಕಡತ ಸಂಖ್ಯೆ: ಇಡಿ 98 ಹೆಚ್‌ಪಿಸಿ 2026

(ಬಸವರಾಜ ರಾಯರೆಡ್ಡಿ)
ಉನ್ನತ ಶಿಕ್ಷಣ ಸಚಿವರು

( ಅನುಬಂಧ

## ಇಲಾಖಾ ವ್ಯಾಪ್ತಿಯ ದಾವಣಗೆರೆ ಜಿಲ್ಲೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮಾಹಿತಿ.

| Sl.No. | NAME & ADDRESS OF THE COLLEGE | Year of Establishment | Taluka | District | Assembly Constituency | UG Course Offered | PG Courses Offered | Student Strength | Science Colleges | SOP | Selected under RUSA Scheme | College Building Type | Own Land Available at Present (In Acres) (PROCESSED) |
|---|---|---|---|---|---|---|---|---|---|---|---|---|---|
| 1 | Sri Sri Shivalingeshwara Swamy Government First Grade College, Channagiri - 577 213 | 1980 | Channagiri | Davanagere | Channagiri | BSc - PCM, BSc - CBZ, BA - HEP, BA - HES, BA-HEEopt, BCom, BBM or BBA, BSc-PMCs, BA-HSEopt, BA-HSKopt, BA - HPS | M.Com., MA - ECONOMICS, MA - POLITICAL SCIENCE, MA - SOCIOLOGY | 1401 | Y | Yes | Yes | Own | 8.425 |
| 2 | Sri Basaveshwara Government First Grade College, Mayakonda - 577 534 | 1988 | Davanagere | | Mayakonda | BA - HEP, BCom, BBM or BBA, BA - HSKopt, BA - HPS | - Nil - | 179 | | No | No | Own | 2 |
| 3 | Government First Grade College, Nyamathi - 577 223, (Honnali Tq ) | 1991 | Honnali | | Honnali | BSc - PMCs, BA - HEP, BCom, BA - HSKopt | - Nil - | 396 | Y | Yes | No | Own | 6 |
| 4 | Government First Grade College, MCC B Block, Davanagere - 577 004 | 1992 | Davangere | | Davangere | BSc - PCM, BSc - PMCs, BSc - CBZ, BA - HEP, BA - HES, BA-HEEopt, BCom, BBM or BBA, BA-HSKopt, BA - HPS, BA - HECa, BA - EJKopt | MA-Kannada, M.Com., MA - ENGLISH, MBA | 3217 | Y | No | Yes | Own | 2 |
| 5 | Government First Grade Womens College, Davanagere - 577 002 | 2007 | Davanagere | | Davanagere North | BSc - PCM, BSc - PMCs, BA - HEP, BA - HES, BCom, BBM or BBA, BA-HSKopt, BA-PsSEopt, BA - EoptJKopt | - Nil - | 1541 | Y | No | Yes | Own | 2 |
| 6 | Government First Grade College, Honnali - 577 217 | 2007 | Honnali | | Honnali | BSc - PCM, BSc - PMCs, BSc - CBZ, BA - HEP, BA - HES, BA-HEKopt, BCom, BBM or BBA, BA-HSEopt, BA-HSKopt, BA-HPEd | - Nil - | 986 | Y | Yes | No | Own | 5.02 |
| 7 | Government First Grade College, Harihara - 577 601 | 2007 | Harihar | | Harihar | BSc - PCM, BSc - PMCs, BA - HEP, BA - HES, BA- HEKopt, BA-HEEopt, BCom, BBM or BBA | - Nil - | 1302 | Y | No | No | Own | 2.12 |
| 8 | Government First Grade College, Harapanahalli - 583 231 | 2007 | Harapanahalli | | Harapanahalli | BSc - PCM, BSc - PMCs, BA - HEP, BA - HES, BA- HEKopt, BA-HEEopt, BCom, BBM or BBA | - Nil - | 1426 | Y | Yes | No | OLD TALUK OFFICE BUILDING | 4.8 |
| 9 | Government First Grade College, Jagalur - 577 528 | 2007 | Jagalur | | Jagalur | BSc - PCM, BSc - PMCs, BA - HEP, BA - HES, BCom, BBM or BBA, BA - HSKopt, BA - HSEopt | - Nil - | 508 | Y | Yes | No | Own | 5 |
| 10 | Government First Grade College, Sante Bennur - 577 552, Channagiri Tq | 2007 | Channagiri | | Channagiri | BA - HEP, BA - HES, BA-HEEopt, BCom, BA-HSKopt, BA - HPKopt | - Nil - | 289 | Y | Yes | No | Functioning from Govt. School/ PU College Building | 7.575 |
| 11 | Janatha Government First Grade College, Basavapatna - 577 551, Channagiri Tq | 2007 | Channagiri (Tq) | | Mayakonda | BA - HEP, BA- HEKopt, BCom, BBM or BBA, BA-HSKopt, BA - HPS | - Nil - | 314 | | Yes | No | Own | 3.05 |

ಅನುಬಂಧ

ಇಲಾಖಾ ವ್ಯಾಪ್ತಿಯ ದಾವಣಗೆರೆ ಜಿಲ್ಲೆಯಲ್ಲಿರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಮಾಹಿತಿ.

| Sl.No. | NAME & ADDRESS OF THE COLLEGE | |
|---|---|---|
| 1 | A V KAMALAMMA COLLEGE FOR WOMEN DAVANAGERE | 2nd Main, AKKAMAHADEVI ROAD, P J Extension DAVANAGERE 577002 |
| 2 | A R G COLLEGE OF ARTS & COMMERCE DAVANAGERE | PRINCIPAL, A R G COLLEGE OF ARTS & COMMERCE, BEHIND BAJUPI DENTAL HOSPITAL, P J Extension DAVANAGERE 577004 |
| 3 | BEA COLLEGE OF EDUCATION DAVANAGERE | S NIJALINGAPPA BADAVANE 2ND MAIN 11TH CROSS DAVANAGERE 577 004 |
| 4 | M M COLLEGE OF EDUCATION DAVANAGERE | ANUBHAVA MANTAPPA DAVANAGERE 577 004 |
| 5 | SHREE MANJUNATHA SWAMY FIRST GRADE COLLEGE DAVANAGERE | SARASWATI NAGARA NITTUVALLI DAVANAGERE 577 004 |
| 6 | M S B ARTS & COMMERCE COLLEGE DAVANAGERE | PRINCIPAL, M S B ARTS & COMMERCE COLLEGE, AKKAMAHADEVI ROAD, J P EXTENSION, DAVANAGERE -577002 |
| 7 | ARM FIRST GRADE COLLEGE DAVANAGERE | NIJALINGAPPA BADAVANE NEAR BAKKESHWARA KALYANA MANTAPA 577 004 |
| 8 | R L LAW COLLEGE DAVANAGERE | P J EXTENTION AKKAMAHADEVI ROAD DAVANAGERE 577 002 |